# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ. 17866/2014

| | |
|---|---|
| ಸಾಕ್ಷಿದಾರರ ಹೆಸರು : | ರವಿಕುಮಾರ ಹೆಚ್. ಎ. |
| ತಂದೆಯ ಹೆಸರು : | ಲೇಟ್. ಆಂಜನಪ್ಪ |
| ವಯಸ್ಸು : | 66 ವರ್ಷ |
| ಉದ್ಯೋಗ : | ನಿವೃತ್ತ ಪಿ.ಎಸ್.ಐ |
| ವಾಸ : | ಪರಪ್ಪನ ಅಗ್ರಹಾರ, ಬೆಂಗಳೂರು. |

**ದಿನಾಂಕ 15/03/2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**
**ದಂ.ಪ್ರ.ಸಂ.ಕಲಂ. 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ**

1. ನಾನು 2012 ರಿಂದ 2018 ರವರೆಗೆ ಮೈಕೋ ಲೇಔಟ್ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 10/09/2013 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-8 ರವರಿಂದ ಪಡೆದುಕೊಂಡಿರುತ್ತೇನೆ. ದಿನಾಂಕ 15/09/2013 ರಂದು ಚಾಸಾ-6 ಮತ್ತು 7 ರವರಿಗೆ ಈ ಪ್ರಕರಣದ ಆರೋಪಿಯನ್ನು ಪತ್ತೆ ಹಚ್ಚಿ ಕರೆದುಕೊಂಡು ಬರುವಂತೆ ನೇಮಿಸಿರುತ್ತೇನೆ. ಅದೇ ದಿನ ಮದ್ಯಾಹ್ನ 12.00 ಗಂಟೆಗೆ 1 ಮತ್ತು 2 ನೇ ಆರೋಪಿತರನ್ನು ಕರೆದುಕೊಂಡು ಬಂದು ನನ್ನ ಮುಂದೆ ಹಾಜರು ಪಡಿಸಿರುತ್ತಾರೆ ಮತ್ತು ಚಾಸಾ-7 ರವರು ವರದಿ ನೀಡಿರುತ್ತಾರೆ.

3. ಇಬ್ಬರು ಆರೋಪಿತರ ಬಳಿ ಇದ್ದ ಚಿನ್ನದ ಆಭರಣಗಳನ್ನು ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಪೊಲೀಸ್ ಠಾಣೆಯಲ್ಲಿಯೇ ಪಂಚನಾಮೆ ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. 1ನೇ ಆರೋಪಿಯಿಂದ ಒಂದು ಚಿನ್ನದ ಸರ 30 ಗ್ರಾಂ

ಮತ್ತು 2 ಗ್ರಾಂ ನ ಒಂದು ಮಹಿಳೆಯರ ಉಂಗುರ ಇದ್ದು, ಅವುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. 2ನೇ ಆರೋಪಿಯ ಬಳಿ ಏನು ಇರಲಿಲ್ಲ. ಅಮಾನತ್ತು ಪಡಿಸಿಕೊಂಡ ಆಭರಣಗಳನ್ನು ಮಾಲುಪಟ್ಟಿಯಲ್ಲಿನ ಮೂದಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಅದೇ ದಿನ ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. 1 ಮತ್ತು 2ನೇ ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

4. ಫಿರ್ಯಾದಿಯನ್ನು ಠಾಣೆಗೆ ಕರೆಯಿಸಿ ಮಾಲು ಮತ್ತು ಆರೋಪಿತರನ್ನು ಗುರುತಿಸಿದ ಬಗ್ಗೆ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನ್ಯಾಯಾಲಯದಿಂದ ಅನುಮತಿ ಪಡೆದು ಆಭರಣಗಳನ್ನು ಚಾಸಾ-1 ರವರ ಮಧ್ಯಂತರ ವಶಕ್ಕೆ ಕೊಟ್ಟಿರುತ್ತೇನೆ. ಆಭರಣಗಳನ್ನು ಮತ್ತು ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ.

5. ಸಾಕ್ಷಿಯು ಚಾಸಾ-7 ರವರು ಕೊಟ್ಟ ವರದಿಯ ಪ್ರತಿ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ವರದಿಯ ಪ್ರತಿಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಗುರುತಿಸಲಾಯಿತು**. ಸಾಕ್ಷಿಯು ಅಮಾನತ್ತು ಪಂಚನಾಮೆಯ ಪ್ರತಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಅಮಾನತ್ತು ಪಂಚನಾಮೆಯ ಪ್ರತಿಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು**. ಸಾಕ್ಷಿಯು ಫೋಟೋನ ಜರಾಕ್ಸ ಪ್ರತಿಯನ್ನು ನೋಡಿ ಅದರಲ್ಲಿರುವ ಒಡವೆಗಳನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಸದರಿ ಫೋಟೋನ ಜರಾಕ್ಸ ಪ್ರತಿಯನ್ನು ನಿಪಿ-3 ಎಂದು ಗುರುತಿಸಲಾಯಿತು**. ಸಾಕ್ಷಿಯು ಮುಚ್ಚಳಿಕೆ ಪತ್ರದ ಪ್ರತಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಮುಚ್ಚಳಿಕೆ ಪತ್ರದ**

**ಪ್ರತಿಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)

ಮು.ಮ.ದಂ.ನ್ಯಾ.ಬೆಂ.ನಗರ.